# ನವಿಲುಗನ್ನಡಿ

- ಜ.ನಾ. ತೇಜಶ್ರೀ ಅವರು ಪದ್ಮಾ ಶ್ರೀರಾಮ್ ಜೊತೆ ನಡೆಸಿದ ಸಂದರ್ಶನ ಹಲವು ವಿಷಯಗಳಿಂದ ಕೂಡಿತ್ತು. 'ಎಲ್ಲರೊಡನೆ ನಾನೂ ಅಷ್ಟೆ' ಎನ್ನುವ ಮಾತು ಅವರ ಸರಳತೆಗೆ ಸಾಕ್ಷಿ. ನಯನಾ ಕಾಶ್ಯಪ್ ಅವರ 'ಮಹಿಳಾ ಸಾಹಿತ್ಯ ನವಯುಗದ ನವಾನ್ವೇಷಣೆ' ಮಹಿಳಾ ಸಾಹಿತ್ಯದ ಹಲವು ಮಗ್ಗುಲುಗಳನ್ನು ಸೊಗಸಾಗಿ ಬಿಂಬಿಸಿದ ಲೇಖನ.

**ಮಾ.ವೆಂ. ಶ್ರೀನಾಥ, ಬೆಂಗಳೂರು**

- ಲೇಖಕಿ ಪದ್ಮಾ ಶ್ರೀರಾಮ್ ಅವರ ಸಂದರ್ಶನ ಅವರ ಸರಳ, ಸಹಜ ವ್ಯಕ್ತಿತ್ವ ತೆರೆದಿರಿಸಿದೆ. ಇಂತಹ ಬೆಲೆ ಕಟ್ಟಲಾಗದ ಸಂದರ್ಶನಗಳಿಗಾಗಿಯೇ ಪ್ರತಿ ತಿಂಗಳು 'ಮಯೂರ'ಕ್ಕಾಗಿ ನನ್ನಂಥವರು ಚಾತಕ ಪಕ್ಷಿಯಾಗಿ ಕಾಯುತ್ತಿರುತ್ತೇವೆ.

**ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ,ಹೊಸಪೇಟೆ**

- ಸುಮಂಗಲಾ ಅವರ 'ನಾವೇ ತರುವೆವು ಆ ಬೆಳಗನು...!' ಹೆಣ್ಣಿನ ವಿವಿಧ ಮಜಲುಗಳನ್ನು ಪರಿಚಯಿಸಿದೆ. ಒಂದೆಡೆ ಸಬಲೀಕರಣದ ವಿಶ್ವಾಸ, ಇನ್ನೊಂದೆಡೆ ಕುಟುಂಬ– ಸಮಾಜಗಳ ಮಧ್ಯೆ ತೊಳಲಾಟ. ಇವನ್ನು ಕಥೆಗಾರ್ತಿ ಸುಂದರವಾಗಿ ನಿರೂಪಿಸಿದ್ದಾರೆ. ಆದರೆ, ಅಂತ್ಯದಲ್ಲಿ ಸೋತಂತೆ ಚಿತ್ರಿಸಿದ್ದು ಸರಿಯಲ್ಲ.

**ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ**

- ಸ್ಮಿತಾ ಅಮೃತರಾಜ್ ಅವರ 'ಬಂಧ ಹಸನಾದಾಗ' ಕವಿತೆಯು ಜೀವನದ ಅನಿರೀಕ್ಷಿತತೆಗಳಲ್ಲಿ ಹೊಳೆಯುವ ತಿಳಿವನ್ನು ಸೊಗಸಾಗಿ ಅರಳಿಸಿದೆ. 'ಕಾವ್ಯಸಂಕ' ಅಂಕಣದ ಮಿಂಗ್ ಚಾನ್ ವೂ ಅವರ 'ಹೊಕ್ಕಳಲಿ ಹೂವಿದೆ' ಕವಿತೆಯಲ್ಲಿ ಗಂಡು ದರ್ಪವ ಮೆಟ್ಟಿ ಅರಳುವ ಮೈತ್ರಿ ಮತ್ತು ಕಾರುಣ್ಯವು ಹೆಣ್ತನದ ಮಹತ್ವ ಸಾರುತ್ತದೆ.

**ರಮಣ್ ಶೆಟ್ಟಿ ರೆಂಜಾಳ, ಮುಂಬೈ**

- 'ಕಾಡಿಗೆ ಕಣ್ಣು' ಅಂಕಣದಲ್ಲಿ ಕಲೀಮ್ ಉಲ್ಲಾ ಅವರ 'ಪುಕ್ಕ ಎಣಿಸಿಟ್ಟ ಪುಟ್ಟ ಬಾಲಕರು' ಸೊಗಸಾಗಿತ್ತು. ಈ ಅಂಕಣಕ್ಕಾಗಿಯೇ ನಾನು ಪ್ರತಿ ತಿಂಗಳು ಮಯೂರ ಓದುವೆ. ಇಂಥ ಅಪರೂಪದ ಅಂಕಣ ಬರೆಯುತ್ತಿರುವ ಲೇಖಕ ಕಲೀಮ್ ಉಲ್ಲಾ ಹಾಗೂ ಇದನ್ನು ಪ್ರಕಟಿಸುತ್ತಿರುವ




ಮಯೂರದ ಸಂಪಾದಕರಿಗೂ ಅಭಿನಂದನೆಗಳು

**ಕೆ.ವಿ. ಕೃಷ್ಣಮೂರ್ತಿ, ಬೆಂಗಳೂರು**

- ಮೀನಾ ಮೈಸೂರು ಅವರ 'ಅಪ್ಪಂದಿರ ದಿನಾಚರಣೆ' ಕಥೆ ಒಂದು ವಿಶೇಷ ಅನುಭವ, ಭಾಷಾ ಸೊಗಡು ಮತ್ತು ಕಥಾವಸ್ತುವಿನಿಂದ ಸೊಗಸಾಗಿದೆ.

**ಎಸ್.ಆರ್.ನರಸಿಂಹ ಪ್ರಸಾದ್, ಕುಣಿಗಲ್**

- 'ಕಲ್ಲುಸಕ್ಕರೆ' ಅಂಕಣದಲ್ಲಿ ಶ್ರೀನಿವಾಸ ಶೆಟ್ಟಿ ಅವರ ಲೇಖನವು ದೇವನೂರ ಮಹಾದೇವ ಅವರ ಉದಾತ್ತ, ಮಾನವೀಯ ಮಿಡಿತಗಳನ್ನು ಆಪ್ತವಾಗಿ ಚಿತ್ರಿಸಿದೆ.

**ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**

- ಸಮುದ್ಯತಾ ಕಂಜರ್ಪಣೆ ಅವರ 'ಪದ್ದಮ್ಮನ ಮೂಗುತಿ' ಕಥೆ ತೀರಿ ಹೋದ ನನ್ನ ತಾಯಿ ಅವರ ಮೂಗುತಿಯನ್ನು ನೆನಪಿಸಿ ದುಃಖ ಉಮ್ಮಳಿಸಿ ಬಂದಿತು. ಅಮ್ಮ ಧರಿಸುತ್ತಿದ್ದ ಬಾತುಕೋಳಿ, ಮೀನಿನಾಕಾರದ ಅಗಲವಾದ ಮೂಗುತಿ ಆಕೆ ತೀರಿಹೋದಾಗ ಮೌನವಾಗಿ ಕೂತಿದ್ದನ್ನು ಕಥೆ ನೆನಪಿಸಿತು. ಮನಸ್ಸನ್ನು ಆರ್ದ್ರಗೊಳಿಸಿದ ಅಮ್ಮನ ನೆನಪಿಸಿ ಕಣ್ಣು ತೇವಗೊಳಿಸಿದ ಹೃದಯಸ್ಪರ್ಶಿ ಕಥೆ ಇದು.

**ಕೆ.ಎಂ. ರುಕ್ಮಿಣಿ ವೆಂಕುಮಾರ್, ಬೆಂಗಳೂರು**